ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/11/ಇಸಿಎಸ್(2)/2019-20

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-01,
ದಿನಾಂಕ:16.03.2020.

**ಸುತ್ತೋಲೆ**

ವಿಷಯ : 2019-20 ನೇ ಸಾಲಿನ ಸೆಮಿಸ್ಟರ್ ಡಿಪ್ಲೊಮಾ ಪರೀಕ್ಷಾ ಚಟುವಟಿಕೆಗಳ ಪರಿಷ್ಕೃತ ವೇಳಾಪಟ್ಟಿ.

ಉಲ್ಲೇಖ : 1. ಪತ್ರ ಸಂಖ್ಯೆ: ಡಿಟಿಇ/18/ಎಸಿಎಂ(2)/2019-20, ದಿ: 15.06.2019.

2. ಪತ್ರ ಸಂಖ್ಯೆ: ಡಿಟಿಇ/53/ಎಸಿಎಂ(1)/2019-20, ದಿ: 13.03.2020.

*-*-*-*

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಪಟ್ಟಂತೆ, ಉಲ್ಲೇಖ(1) ರಲ್ಲಿ 2019-20 ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯನ್ನು ಪ್ರಕಟಿಸಲಾಗಿತ್ತು, ಅದರನ್ವಯ 02/04/06 ನೇ ಸೆಮಿಸ್ಟರ್‌ನ ತರಗತಿಗಳ ಮುಕ್ತಾಯ ದಿನಾಂಕ: 23.03.2020 ಎಂದು ನಿಗಧಿ ಪಡಿಸಲಾಗಿತ್ತು.

ಉಲ್ಲೇಖ(2) ರ ಪತ್ರದಲ್ಲಿ Novel Coronavirus (COVID-19) ಸಂಬಂಧ ದಿನಾಂಕ: 14.03.2020 ರಿಂದ ಅನ್ವಯಿಸುವಂತೆ 15 ದಿನಗಳ ಕಾಲ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ವಿದ್ಯಾರ್ಥಿಗಳಿಗೆ ರಜೆ ಘೋಷಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಪರೀಕ್ಷಾ ಚಟುವಟಿಕೆಗಳ ವೇಳಾಪಟ್ಟಿಯನ್ನು ಪರಿಷ್ಕರಿಸಲಾಗಿದೆ.

**02/04/06 ನೇ ಸೆಮಿಸ್ಟರ್ ಪರೀಕ್ಷಾ ಚಟುವಟಿಕೆಯ ಪರಿಷ್ಕೃತ ವೇಳಾಪಟ್ಟಿ**

| ಕ್ರ.ಸಂ | ಪರೀಕ್ಷಾ ಚಟುವಟಿಕೆ | ದಿನಾಂಕ |
|---|---|---|
| 1. | 02/04/06 ನೇ ಸೆಮಿಸ್ಟರ್‌ನ ತರಗತಿಗಳ ಮುಕ್ತಾಯ | 08.04.2020 |
| 2. | ಡಿಪ್ಲೊಮಾ ಸೆಮಿಸ್ಟರ್ ಥಿಯರಿ ಪರೀಕ್ಷೆಗಳ ಪ್ರಾರಂಭ | 16.04.2020 |
| 3. | ಡಿಪ್ಲೊಮಾ ಸೆಮಿಸ್ಟರ್ ಪ್ರಾಯೋಗಿಕ ಪರೀಕ್ಷೆಗಳ ಪ್ರಾರಂಭ | 06.05.2020 |

ಮೇಲ್ಕಂಡ ಪರಿಷ್ಕೃತ ಪರೀಕ್ಷಾ ಚಟುವಟಿಕೆಗಳ ವೇಳಾಪಟ್ಟಿಯನ್ವಯ ಪ್ರಾಚಾರ್ಯರುಗಳು ಕ್ರಮ ವಹಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
16/03/2020

ಇವರಿಗೆ: ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ – ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿ :

1. ಇ-ಆಡಳಿತ-ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
2. ಇ.ಸಿ.ಎಸ್ ವಿಭಾಗದ ಕಡತಕ್ಕೆ

Scanned by CamScanner